**ಕರ್ನಾಟಕ ಸರ್ಕಾರ**

ಸಂ.ಡಿಟಿಇ 01 ಎಸ್‌ಸಿಹೆಚ್(1) 2014-15

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 27-02-2015.

**-:: ಸುತ್ತೋಲೆ ::-**

**ವಿಷಯ:-** ಶುಲ್ಕ ವಿನಾಯಿತಿ/ವಿದ್ಯಾರ್ಥಿವೇತನವನ್ನು ಕಾಲೇಜಿನ ವಿದ್ಯಾರ್ಥಿಗಳಿಗೆ ವಿವಿಧ ಯೋಜನೆಯಡಿಯಲ್ಲಿ ವಿತ್ತರಿಸಲಾಗುತ್ತಿದ್ದು, ವಿದ್ಯಾರ್ಥಿಗಳಿಗೆ ಹಣ ಸಂದಾಯ ಮಾಡಿದ ನಂತರ ಸ್ವೀಕೃತಿ/ಸಂದಾಯ ರಸೀದಿ (Acquittance) ಕಳುಹಿಸುವ ಬಗ್ಗೆ.

***********

ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ 2013-14ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ರಕ್ಷಣಾ ಸಿಬ್ಬಂದಿಯ ಮಕ್ಕಳಿಗೆ ಮಂಜೂರಾತಿ ನೀಡಲಾಗಿರುವ ಕ್ರಮವಾಗಿ ಶುಲ್ಕ ವಿನಾಯಿತಿ ಮತ್ತು ವಿದ್ಯಾರ್ಥಿವೇತನವನ್ನು ಈಗಾಗಲೇ ರಾಜ್ಯದ ಎಲ್ಲಾ ಅನುದಾನಿತ ಪಾಲಿಟೆಕ್ನಿಕ್ ಮತ್ತು ಅನುದಾನಿತ/ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳಿಗೆ ವಿತರಿಸಲಾಗಿದ್ದು, ಇವರಲ್ಲಿ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ONLINE DIPLOMA INTERACTIVE COUNSELLING ಮುಖಾಂತರ ಆಯ್ಕೆ ಮಾಡುವ ವಿದ್ಯಾರ್ಥಿಗಳು, ಇದೇ ರೀತಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿ.ಇ.ಟಿ ಮುಖಾಂತರ ಆಯ್ಕೆ ಮಾಡುವ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ/ವಿದ್ಯಾರ್ಥಿವೇತನ/ಪ್ರತಿಭಾ ಪುರಸ್ಕಾರ, ಕಿರಿಯ ತಾಂತ್ರಿಕ ಶಾಲೆಯ ವಿದ್ಯಾರ್ಥಿಗಳಿಗೆ ನೀಡುವ ಶಿಷ್ಯವೇತನವನ್ನು ಮತ್ತು ಇನ್ನಿತರೇ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಸಂಸ್ಥೆಗಳಿಗೆ ಕಳುಹಿಸಿಕೊಡಲಾಗಿರುವುದಕ್ಕೆ, ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಈ ಕಛೇರಿಯಿಂದ ಕಳುಹಿಸಿಕೊಟ್ಟ ಒಂದು ತಿಂಗಳೊಳಗಾಗಿ ವಿತರಿಸಿ, ಈ ಕೆಳಕಂಡ ನಮೂನೆಯಲ್ಲಾಗಲಿ ಅಥವಾ ತಮ್ಮ ಸಂಸ್ಥೆಯ ವಹಿಯಲ್ಲಿ (Register) ಸಹಿ ಪಡೆದು, ಅದರ ಫೋಟೊ ಪ್ರತಿಯನ್ನು ಈ ಕಛೇರಿಗೆ ಕಳುಹಿಸಿಕೊಡತಕ್ಕದ್ದು ಹಾಗೂ ವಿತರಣೆ ಮಾಡದೆಯಿರುವ ಅಥವಾ ವಿದ್ಯಾರ್ಥಿಗಳು ಲಭ್ಯತೆಯಿಲ್ಲದೆ ಉಳಿಕೆಯಾಗಿರುವ ಮೊತ್ತವನ್ನು ಕೂಡಲೇ ನಿರ್ದೇಶಕರ ಹೆಸರಿಗೆ ಚೆಕ್ ಮುಖಾಂತರ ಅಥವಾ ಡಿ.ಡಿ ಮುಖಾಂತರ ಈ ಕಛೇರಿಗೆ ಸಲ್ಲಿಸಲು ಸಹ ತಿಳಿಯಪಡಿಸಿದೆ. ಇವುಗಳನ್ನು ಶೀಘ್ರವಾಗಿ ವಿದ್ಯಾರ್ಥಿಗಳಿಗೆ ಚೆಕ್ ಮುಖಾಂತರ ವಿತರಿಸಿದ ನಂತರ ವಿದ್ಯಾರ್ಥಿಗಳಿಂದ ಮತ್ತು ಅವರ ಪೋಷಕರಿಂದ ಸಹಿ ಪಡೆದ ಸ್ವೀಕೃತಿ/ಸಂದಾಯ ರಸೀದಿ(Acquittance)ಗಳನ್ನು ಮೂಲ ಪತ್ರಿ ಹಾಗೂ ಒಂದು ಫೋಟೋ ಪತ್ರಿಯನ್ನು ಈ ಕಛೇರಿಗೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ ಹಾಗೂ ಈ ಹಿಂದೆ ಕಳುಹಿಸಲ್ಪಟಿರುವ ಹಣದ ಬಗ್ಗೆಯೂ ಕೂಡಲೇ ಕ್ರಮ ಜರುಗಿಸಿ ಸ್ವೀಕೃತಿ/ಸಂದಾಯ ರಸೀದಿ(Acquittance)ಗಳನ್ನು ಕಳುಹಿಸದೇ ಇದ್ದಲ್ಲಿ ಜರೂರಾಗಿ ಕಳುಹಿಸಿಕೊಡಲು ಸೂಚಿಸಿದೆ ಹಾಗೂ 2013-14 ಮತ್ತು 2014-15ನೇ ಸಾಲಿನ ಸ್ವೀಕೃತಿ/ಸಂದಾಯ ರಸೀದಿ(Acquittance)ಗಳನ್ನು ಪ್ರತ್ಯೇಕವಾಗಿ ಕಳುಹಿಸಿಕೊಡತಕ್ಕದ್ದು. ಈ ವಿಷಯವನ್ನು ಜರೂರೆಂದು ಪರಿಗಣಿಸಲು ಸೂಚಿಸಿದೆ.

ನಿರ್ದೇಶಕರು

**ಇವರಿಗೆ,**

1. ರಾಜ್ಯದ ಎಲ್ಲಾ ಪ್ರಾಂಶುಪಾಲರಿಗೆ, ಅನುದಾನಿತ/ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳಿಗೆ ಮತ್ತು ಪಾಲಿಟೆಕ್ನಿಕ್‌ಗಳಿಗೆ ಮತ್ತು ಪ್ರಿನ್ಸಿಪಾಲರು, ಕಿರಿಯ ತಾಂತ್ರಿಕ ಶಾಲೆಗಳು.
2. ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.